# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1048 |
| ಸದಸ್ಯರ ಹೆಸರು | : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 25.07.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿರುವ ಸನ್ನತಿ ನೀರಾವರಿ ಯೋಜನೆಯ ಪ್ರಸ್ತುತ ಇರುವ ವಸ್ತು ಸ್ಥಿತಿಯೇನು ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ವಿವರ ನಿಡುವುದು) | ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯಡಿ ಬರುವ ಕಲಬುರಗಿ ಜಿಲ್ಲೆಯಲ್ಲಿನ ಸನ್ನತಿ ಏತ ನೀರಾವರಿ ಯೋಜನೆಯಡಿ ಸನ್ನತಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದ್ದು, ಬ್ಯಾರೇಜಿನಲ್ಲಿ ನೀರು ಸಂಗ್ರಹಿಸಲಾಗಿದೆ.<br><br>ಸನ್ನತಿ ಬ್ಯಾರೇಜಿನಡಿ ಸಂಗ್ರಹಗೊಂಡ ನೀರನ್ನು ಸನ್ನತಿ ಏತ ನೀರಾವರಿ ಯೋಜನೆ ಮುಖಾಂತರ ಲಿಫ್ಟ್ ಮಾಡಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ಮತ್ತು ಯಾದಗಿರ್ ಜಿಲ್ಲೆಯ ಯಾದಗಿರ್ ತಾಲ್ಲೂಕುಗಳಡಿಯ 16,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.<br><br>ಸನ್ನತಿ ಏತ ನೀರಾವರಿ ಯೋಜನೆಯಡಿ ಟರ್ನ್‌ಕೀ ಆಧಾರದ ಮೇಲೆ ವಹಿಸಲಾದ ಮುಖ್ಯ ಸ್ಥಾವರದ ಬಾಕಿ ಕಾಮಗಾರಿ, ಫೀಡರ್ ಕಾಲುವೆ ಕಿ.ಮೀ. 0.00 ರಿಂದ 1.88, ಸನ್ನತಿ ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 18.00, ಸನ್ನತಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 16.00, ವಿತರಣಾ ಕಾಲುವೆ ಸಂ.1 ಕಿ.ಮೀ. 0.00 ರಿಂದ 13.50 ರವರೆಗೆ ಪೂರ್ಣಗೊಂಡಿದೆ ಹಾಗೂ ಯರಗೋಳ ಮೈನರ್ ಕಾಲುವೆ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಇಲ್ಲಿಯವರೆಗೆ ರೂ.552.00 ಕೋಟಿಗಳ ವೆಚ್ಚ ಭರಿಸಲಾಗಿರುತ್ತದೆ. |
| ಆ) | ಮುಖ್ಯ ಕಾಲುವೆ, ಉಪಕಾಲುವೆ, ಜಮೀನಿನ ಕಾಲುವೆಗಳ ಉದ್ದವೆಷ್ಟು; | ಸನ್ನತಿ ಏತ ನೀರಾವರಿ ಯೋಜನೆಯಡಿ ಬರುವ ಸನ್ನತಿ ಮುಖ್ಯ ಕಾಲುವೆ–18.00 ಕಿ.ಮೀ, ಸನ್ನತಿ ಶಾಖಾ ಕಾಲುವೆ–18.00 ಕಿ.ಮೀ, ವಿತರಣಾ ಕಾಲುವೆ ಸಂ.1–13.50 ಕಿ.ಮೀ, ಯರಗೋಳ ಮೈನರ್ ಕಾಲುವೆ–9.74 ಕಿ.ಮೀ ಮತ್ತು ಉಪ ಕಾಲುವೆಗಳು–166.63 ಕಿ.ಮೀ ಉದ್ದವಿದ್ದು, ಒಟ್ಟಾರೆ, ಕಾಲುವೆಗಳ ಉದ್ದ 225.87 ಕಿ.ಮೀ ಇರುತ್ತದೆ. |
| ಇ) | ಸರ್ಕಾರವು ಈ ನೀರಾವರಿ ಯೋಜನೆಯಿಂದ ಜಿಲ್ಲೆಯಲ್ಲಿರುವ ಎಷ್ಟು ಕೆರೆಗಳನ್ನು ಭರ್ತಿ ಮಾಡುವ ಉದ್ದೇಶ ಹೊಂದಿದೆ; ಆ ಕೆರೆಗಳು ಯಾವುವು; (ವಿವರ ನೀಡುವುದು) | ಸದರಿ ಅನುಮೋದಿತ ಯೋಜನೆಯ ವಿವರವಾದ ಯೋಜನಾ ವರದಿಯಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಿದ್ದು, ಹೊರೆತು ಯಾವುದೇ ಕೆರೆ ತುಂಬುವ ಉದ್ದೇಶ ಇರುವುದಿಲ್ಲ.<br><br>ಅದಾಗ್ಯೂ, ರೈತರ ಮನವಿಯ ಮೇರೆಗೆ ಸನ್ನತ್ತಿಯ ಮುಖ್ಯ ಕಾಲುವೆಯಿಂದ ವಡ್ನಳ್ಳಿ ಮತ್ತು ಅಲ್ಲಿಪುರ ಕೆರೆಗಳು ಹಾಗೂ ವಿತರಣಾ ಕಾಲುವೆ ಸಂ.1 ರಿಂದ ಬನಟ್ಟಿ ಕೆರೆ ತುಂಬಲು ಕಾಮಗಾರಿ ಕೈಗೊಳ್ಳಲಾಗಿದೆ. |
| ಈ) | ಸನ್ನತಿ ನೀರಾವರಿ ಯೋಜನೆ ಪೂರ್ಣಗೊಂಡ ನಂತರ ಎಷ್ಟು ಹೇಕ್ಟರ್ ಪ್ರದೇಶದ ಜಮೀನಿಗೆ ನೀರು ಒದಗಿಸಲಾಗುತ್ತದೆ; ಪ್ರಸ್ತುತ ಎಷ್ಟು ಜಮೀನಿಗೆ ನೀರು ಲಭ್ಯವಾಗುತ್ತಿದೆ? (ವಿವರ ನೀಡುವುದು) | ಸನ್ನತಿ ನೀರಾವರಿ ಯೋಜನೆಯಿಂದ ಒಟ್ಟು 16,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದ್ದು, ಇಲ್ಲಿಯವರೆಗೆ 10,650 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ಔಟ್‌ಲೆಟ್ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |

ಸಂಖ್ಯೆ:ಜಸಂಇ 66 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು